# KARNATAKA LOKAYUKTA

No.UPLOK-2/DE.21/2018/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 24.03.2022

## RECOMMENDATION

Sub:- Departmental inquiry against Sri Udaya Kumar, Food Inspector, Koratagere Taluk, Tumkur District– reg.

Ref:- 1) Government Order No.FCS 247 FDE 2016 dated 27.10.2017.

2) Nomination order No. UPLOK-2/DE.21/2018 dated 10.01.2018 of Hon'ble Upalokayukta, State of Karnataka.

3) Inquiry report dated 19.03.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 27.10.2017, initiated the disciplinary proceedings against Sri Udaya Kumar, Food Inspector, Koratagere Taluk, Tumkur District, [hereinafter referred to as Delinquent Government Official, for short as 'DGO' ] and entrusted the Departmental Inquiry to this Institution.
~~~~~~

2. This Institution by Nomination Order No. UPLOK-2/DE.21/2018 dated 10.01.2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, Additional Registrar of Enquiries-14 was re-nominated as Inquiry Officer to continue the said inquiry.

3. The DGO was tried for the charge of illegally issuing BPL card to the ineligible person by misusing his position and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '*proved*' the above charge against the DGO Sri Udaya Kumar, Food Inspector, Koratagere Taluk, Tumkur District.

5. On re-consideration of report of inquiry, I do not find any reason to interfere with the findings recorded by the Inquiry

Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO furnished by the Enquiry Officer, DGO Sri Udaya Kumar has retired from service on 30.04.2018.

7. Having regard to the nature of charge proved against DGO and considering the totality of circumstances, it is hereby recommended to the Govt. to impose penalty of 'withholding 10% pension payable to DGO Sri Uday Kumar(retired), for a period of five years.'

8. Action taken in the matter shall be intimated to this Authority.

Connected records are enclosed herewith.

Sd/- 24/3/22

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–21/2018/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 19/03/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಉದಯ್ ಕುಮಾರ್,** ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/3647/2014/ಸನಿಕಾಸ–2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 15/11/2016.
2. ಸರ್ಕಾರದ ಆದೇಶ ಸಂಖ್ಯೆ: ಆನಾಸ 247 ಆಇಸೇ 2016, ಬೆಂಗಳೂರು, ದಿನಾಂಕ: 27/10/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/21/2018, ಬೆಂಗಳೂರು ದಿನಾಂಕ: 10/01/2018.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಡಿ.ಜಿ ಲಕ್ಷ್ಮೀನರಸಪ್ಪ** ಬಿನ್ ಗಿರಿಯಪ್ಪ ದೊಗ್ಗನಹಳ್ಳಿ ಮಲ್ಲೇಕಾವು ಅಂಚೆ, ಸಿ.ಎನ್.ದುರ್ಗ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ ಶ್ರೀ. **ಉದಯ್ ಕುಮಾರ್,** ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ಇವರ ವಿರುದ್ಧ

ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಆ.ಸ.ನೌ ರವರು ಒಬ್ಬ ಶ್ರೀ. ಡಿ. ದಿಲೀಪ್ ರವರ ತಂದೆಯ ಹೆಸರಿನಲ್ಲಿ 30 ಎಕರೆ ಜಮೀನು ಇದ್ದು, ಅಲ್ಲದೇ ದಿಲೀಪ್ ಇವರು 3ನೇ ದರ್ಜೆ ಗುತ್ತಿಗೆ ಪರವಾನಿಗೆಯನ್ನು ಮಾಡಿಸಿಕೊಂಡಿದ್ದು ಅಲ್ಲದೇ ಭುದಗವಿ ಗ್ರಾಮ ಪಂಚಾಯಿತಿ ಚುನಾವಣೆ-2015 ರಲ್ಲಿ ಸ್ಪರ್ಧಿಸಿದ್ದು, ಇದರ ವಿಷಯ ಗೊತ್ತಿದ್ದರೂ ಸಹಿತ, ಆ.ಸ.ನೌ ರವರು ದಿಲೀಪ್ ಇವರಿಗೆ ಬಿ.ಪಿ.ಎಲ್ ಕಾರ್ಡ್ ಅನ್ನು ವಿತರಣೆ ಮಾಡಿ ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 27/10/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 10/01/2018 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ಉದಯ್ ಕುಮಾರ್, ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 28/08/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

ಆ.ಸ.ನೌ. ಶ್ರೀ. ಉದಯ್ ಕುಮಾರ್, ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ಆದ ನೀವು ಶ್ರೀ. ಡಿ. ದಿಲೀಪ್, ಕಾಂಟ್ರಾಕ್ಟರ್ (ಗ್ರೇಡ್–3) ದೊಗ್ಗನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ರವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅನರ್ಹರಾಗಿದ್ದರೂ ಸಹ ನಿಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅವರಿಗೆ ಪಡಿತರ ಚೀಟಿಯನ್ನು ನೀಡಿ, ಸರ್ಕಾರಕ್ಕೆ ವಂಚನೆ ಮಾಡಿ, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರ ಅಡಿಯಲ್ಲಿ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

1. ಶ್ರೀ. ಡಿ.ಜಿ ಲಕ್ಷ್ಮೀನರಸಪ್ಪ ಬಿನ್ ಗಿರಿಯಪ್ಪ ದೊಗ್ಗನಹಳ್ಳಿ ಮಲ್ಲೇಕಾವು ಅಂಚೆ, ಸಿ.ಎನ್.ದುರ್ಗ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಉದಯ್ ಕುಮಾರ್, ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ಮತ್ತು (2) ಶ್ರೀ. ಡಿ ದಿಲೀಪ್, ಕಾಂಟ್ರಾಕ್ಟರ್

(ಗ್ರೇಡ್-3) ದೊಗ್ಗನಹಳ್ಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಕೊರಟಗೆರೆ ತಾಲ್ಲೂಕು ದೊಗ್ಗನಹಳ್ಳಿ ಗ್ರಾಮದಲ್ಲಿ ಆಸನೌ ಆದ ನೀವು ಅನರ್ಹರಿಗೆ ಅಂದರೆ ಎದುರುದಾರ ನಂ.2 ಶ್ರೀ. ಡಿ ದಿಲೀಪ್ ರವರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ನೀಡಿ ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ. ಎದುರುದಾರ ನಂ.2 ರವರು 3ನೇ ದರ್ಜೆ ಗುತ್ತಿಗೆದಾರರಾಗಿದ್ದು ಅವರ ತಂದೆ ಹೆಸರಿನಲ್ಲಿ 30 ಎ., ಜಮೀನು ಇರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. ಆಸನೌ ಆದ ನೀವು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರ ನಂ.2 ರವರಿಗೆ ಬಿಪಿಎಲ್ ಪಡಿತರ ಚೀಟಿ ತನ್ನ ಅವಧಿಯಲ್ಲಿ ವಿತರಣೆ ಮಾಡಿರುವುದಿಲ್ಲ. ಅಲ್ಲದೆ ತಾನು ಆಹಾರ ನಿರೀಕ್ಷಕನಾಗಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಆದರೆ ಆಹಾರ ಶಿರಸ್ಥೆದಾರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ಎದುರುದಾರ ನಂ.2 ರವರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮಗೆ ಸಂಬಂಧಿಯಾಗಿದ್ದು ಆಸ್ತಿಯ ವಿಷಯವಾಗಿ ತಮ್ಮೊಂದಿಗೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುತ್ತದೆ. ತಮ್ಮ ಕುಟುಂಬವು ಬಹಳಷ್ಟು ಸಾಲ ಮಾಡಿ ಬಡತನ ಸ್ಥಿತಿಯಲ್ಲಿರುತ್ತದೆ. ತನ್ನ ಹೆಂಡತಿ ಕೂಲಿ ಕೆಲಸ ಮಾಡುತ್ತಿದ್ದು

ತಾನು 3ನೇ ದರ್ಜೆ ಗುತ್ತಿಗೆ ಪರವಾನಗಿ ಮಾಡಿಕೊಂಡು ಜೀವನೋಪಾಯಕ್ಕಾಗಿ ಸಣ್ಣಮಟ್ಟ ಕೆಲಸಗಳನ್ನು ಮಾಡುತ್ತಿರುತ್ತೇನೆ. ಆದ್ದರಿಂದ ಸದರಿ ದೂರನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

7. ಆಸನೌ ಆದ ನೀವು ಎದುರುದಾರ ನಂ.2 ಶ್ರೀ. ಡಿ ದಿಲೀಪ್ ಈತನಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಿಲ್ಲವೆಂದು ತಿಳಿಸಿದ್ದಾರೆ. ಆದರೆ ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಆಸನೌ ಆದ ನೀವು ಪಡಿತರ ಚೀಟಿ ವಿತರಿಸಿದ್ದಾರೆಂದು ತಿಳಿಸಿದ್ದಾರೆ.

8. ಆಸನೌ ಆದ ನೀವು ತಮ್ಮ ಆಕ್ಷೇಪಣೆಯಲ್ಲಿ ತಾವು ಕೆಲಸ ನಿರ್ವಹಿಸಿದ ಅವಧಿಯನ್ನು ನಮೂದಿಸಿರುವುದಿಲ್ಲ. ಹೀಗಾಗಿ ಅವರ ವಿರುದ್ಧವೇ ದೂರು ನೀಡಿರವುದರಿಂದ ಅವರೇ ಈ ಪಡಿತರ ಚೀಟಿಯನ್ನು ವಿತರಿಸಿ ಅದನ್ನು ಅಲ್ಲಗಳೆಯುತ್ತಿದ್ದಾರೆಂದು ಕಂಡುಬರುತ್ತದೆ. ಎದುರುದಾರ ನಂ.2 ಶ್ರೀ. ಡಿ ದಿಲೀಪ್ ತಾನು ಬಿಪಿಎಲ್ ಪಡಿತರ ಚೀಟಿ ಹೊಂದಲು ಅರ್ಹನಾಗಿದ್ದು ಯಾವುದೇ ಆಸ್ತಿಯನ್ನು ಹೊಂದಿರುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ ಅವರು ಭೂದಗವಿ ಗ್ರಾಮ ಪಂಚಾಯಿತಿ ಚುನಾವಣೆ 2015 ರಲ್ಲಿ ಸ್ಪರ್ಧಿಸಿದ ಬಗ್ಗೆ ಕರ ಪತ್ರವನ್ನು ದೂರುದಾರರು ಹಾಜರುಪಡಿಸಿದ್ದಾರೆ. ಅಲ್ಲದೆ ಅವರು ತಮ್ಮ ಹೆಸರಿನಲ್ಲಿ ಬಿಪಿಎಲ್ ಪಡಿತರ ಚೀಟಿ ಪಡೆದ ಬಗ್ಗೆ ಅದರ ಪ್ರತಿ ಲಭ್ಯವಿರುತ್ತದೆ.

9. ಒಂದು ವೇಳೆ ಎದುರುದಾರ ನಂ.2 ಶ್ರೀ. ಡಿ. ದಿಲೀಪ್ ರವರು ಆರ್ಥಿಕವಾಗಿ ದುರ್ಭಲವಾಗಿದ್ದರೆ ಈ ರೀತಿ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ. ಎದುರುದಾರ ನಂ.2 ರವರು ತಾನು 3ನೇ ದರ್ಜೆ ಗುತ್ತಿಗೆದಾರನೆಂದು ಒಪಿಕೊಂಡಿದ್ದು ಈ ರೀತಿ ಗುತ್ತಿಗೆ ಕೆಲಸ ಮಾಡುವ ವ್ಯಕ್ತಿ ನಿಯಮ ಪ್ರಕಾರ ಬಿಪಿಎಲ್ ಪಡಿತರ ಚೀಟಿ ಪಡೆಯಲು ಅನರ್ಹನಾಗಿರುತ್ತಾನೆ. ಆದ್ದರಿಂದ ಆಸನೌ ಆದ ನೀವು ಅನರ್ಹ ವ್ಯಕ್ತಿಗೆ ಬಿಪಿಎಲ್ ಪಡಿತರ ಚೀಟಿ ನೀಡಿದ್ದಾರೆಂದು ಕಂಡುಬರುತ್ತದೆ.

10. **ಎದುರುದಾರ ನಂ.2 ಶ್ರೀ. ಡಿ. ದಿಲೀಪ್ ರವರು ಖಾಸಗಿ ವ್ಯಕ್ತಿಯಾಗಿರುವುದರಿಂದ ಆತನ ವಿರುದ್ಧ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರಡಿಯಲ್ಲಿ ಆಗುವುದಿಲ್ಲ ಆದ್ದರಿಂದ ಆತನನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ.**

11. ಆಸನೌ ಆದ ನೀವು ನಿಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅನರ್ಹ ವ್ಯಕ್ತಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಿರುವುದರಿಂದ ನೀವು ಕರ್ತವ್ಯದಲ್ಲಿ ಲೋಪವೆಸಗಿದ್ದೀರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಸನೌ ಆದ ನೀವು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಸನೌ ಆದ ನೀವು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ

ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

14. ಶ್ರೀ. ಉದಯ್ ಕುಮಾರ್, ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ರವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಶಿಸ್ತುಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು, ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 05/04/2021 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ ರವರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ಸಾಕಷ್ಟು ಅವಕಾಶ ನೀಡಿದ್ದಾಗ್ಯೂ ಸಹ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ದೂರುದಾರರು ಮೃತಪಟ್ಟಿರುವುದರಿಂದ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ಶ್ರೀ. ಮಲ್ಲಿಕಾರ್ಜುನ ಕಮತಗಿ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ದೂರುದಾರರಾದ ಶ್ರೀ. ಡಿ.ಜಿ ಲಕ್ಷ್ಮೀನರಸಪ್ಪ ಬಿನ್ ಗಿರಿಯಪ್ಪ ದೊಗ್ಗನಹಳ್ಳಿ ಮಲ್ಲೇಕಾವು ಅಂಚೆ, ಸಿ.ಎನ್.ದುರ್ಗ ಹೋಬಳಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರು ತಮ್ಮ ದೂರಿನಲ್ಲಿ ಆ.ಸ.ನೌ ರವರು ಒಬ್ಬ ಶ್ರೀ. ಡಿ. ದಿಲೀಪ್ ರವರ ತಂದೆಯ ಹೆಸರಿನಲ್ಲಿ 30 ಎಕರೆ ಜಮೀನು ಇದ್ದು, ಅಲ್ಲದೇ ದಿಲೀಪ್ ಇವರು 3ನೇ ದರ್ಜೆ ಗುತ್ತಿಗೆ ಪರವಾನಿಗೆಯನ್ನು ಮಾಡಿಸಿಕೊಂಡಿದ್ದು ಅಲ್ಲದೇ ಭುದಗವಿ ಗ್ರಾಮ ಪಂಚಾಯಿತಿ ಚುನಾವಣೆ–2015 ರಲ್ಲಿ ಸ್ಪರ್ಧಿಸಿದ್ದು, ಇದರ ವಿಷಯ ಗೊತ್ತಿದ್ದರೂ ಸಹಿತ, ಆ.ಸ.ನೌ ರವರು ದಿಲೀಪ್ ಇವರಿಗೆ ಬಿ.ಪಿ.ಎಲ್ ಕಾರ್ಡ್ ಅನ್ನು ವಿತರಣೆ ಮಾಡಿ ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

13. ಶಿಸ್ತು ಪ್ರಾಧಿಕಾರ ಪರಿಶೀಲನಾ ಅಧಿಕಾರಿಗಳು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ದೂರು, ಇದು ಫಾರಂ ನಂ.1 ಮತ್ತು ನಿ.ಪಿ.3 ಇದು ಫಾರಂ ನಂ.2; ನಿ.ಪಿ.4 ಬಿ.ಪಿ.ಎಲ್ ಕಾರ್ಡ್‌ನ ನಕಲು ಪ್ರತಿ; ನಿ.ಪಿ.5 ಗುತ್ತಿಗೆ ಪರವಾನಿಗೆ; ನಿ.ಪಿ.6 ಬ್ಯಾಂಕ್ ಪಾಸ್‌ಬುಕ್; ನಿ.ಪಿ.7 ಪಡಿತರ ಚೀಟಿಯ ಆನ್‌ಲೈನ್ ಪ್ರತಿ ಮತ್ತು ನಿ.ಪಿ.8 ಶ್ರೀ. ಡಿ. ದಿಲೀಪ್ ರವರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ ಕರಪತ್ರ ಎಂದು ಗುರುತಿಸಿಕೊಂಡಿರುತ್ತಾರೆ.

14. ಮುಂದುವರೆದು, ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರ ಆಕ್ಷೇಪಣೆಯಲ್ಲಿ ತನ್ನ ಅವಧಿಯಲ್ಲಿ ಬಿ.ಪಿ.ಎಲ್ ಕಾರ್ಡ್‌ನ್ನು ಶ್ರೀ. ಡಿ. ದಿಲೀಪ್ ರವರಿಗೆ ನೀಡಿರುವುದಿಲ್ಲ, ತಾನು ಆಹಾರ ನಿರೀಕ್ಷಕರಾಗಿ ಮಾತ್ರ ಕರ್ತವ್ಯ ನಿರ್ವಹಿಸಿದ್ದು, ಆಹಾರ

ಶಿರಸ್ತೇದಾರರಾಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ ಅಂತಾ ಹೇಳಿದ್ದು, ಆದರೆ ಆ.ಸ.ನೌ ರವರು ತಾವು ಕೆಲಸ ನಿರ್ವಹಿಸಿದ ಅವಧಿಯನ್ನು ನಮೂದಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು, ಪಿ.ಡಬ್ಲ್ಯೂ.1 ಇವರು ದೂರುದಾರರು ಆ.ಸ.ನೌ ಇವರ ವಿರುದ್ಧವೇ ದೂರು ನೀಡಿದ್ದರಿಂದ ಆ.ಸ.ನೌ ರವರು ಪಡಿತರ ಚೀಟಿಯನ್ನು ನೀಡಿರುವುದು ಅಲ್ಲಗಳೆಯುವಂತಿಲ್ಲ ಅಂತಾ ನುಡಿದಿರುತ್ತಾರೆ. ಪಡಿತರ ಚೀಟಿಯ ಪ್ರತಿಯನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.4 ಅಂತಾ ಗುರುತಿಸಲಾಗಿರುತ್ತದೆ. ಅದನ್ನು ಶ್ರೀ. ಡಿ. ದಿಲೀಪ್ ರವರಿಗೆ ನೀಡಿದ್ದು ಕಂಡುಬರುತ್ತದೆ.

15. ಈ ದೂರನ್ನು ಸಲ್ಲಿಸಿದಾಗ ಶ್ರೀ. ಡಿ. ದಿಲೀಪ್ ರವರನ್ನು 2ನೇ ಎದುರುದಾರರೆಂದು ಉಲ್ಲೇಖಿಸಲಾಗಿತ್ತು, ಆ ವೇಳೆಯಲ್ಲಿ ಡಿ. ದಿಲೀಪ್ ಇವರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ನಂತರ ಇವರು ಖಾಸಗಿ ವ್ಯಕ್ತಿಯಾಗಿದ್ದರಿಂದ ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿಯಲ್ಲಿ ಕ್ರಮ ಕೈಗೊಳ್ಳಲು ಬಾರದ ಕಾರಣ ಇವರನ್ನು ಈ ಪ್ರಕರಣದಿಂದ ಕೈಬಿಡಲಾಗಿರುತ್ತದೆ. ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಡಿ. ದಿಲೀಪ್ ಇವರಿಗೆ ಇವರ ತಂದೆ ಹೆಸರಿನಲ್ಲಿ 30 ಎಕರೆ ಪಿತ್ರಾರ್ಜಿತ ಜಮೀನು ಇರುತ್ತದೆ ಅಂತಾ ದೂರುದಾರರು ದೂರಿನಲ್ಲಿ ಹೇಳಿರುತ್ತಾರೆ ಅಂತಾ ನುಡಿದಿರುತ್ತಾರೆ. ಡಿ. ದಿಲೀಪ್ ಇವರು ತಮ್ಮ ಆಕ್ಷೇಪಣೆಯಲ್ಲಿ ಜಮೀನು ಇರುತ್ತದೆ ಅಂತಾ ಒಪ್ಪಿಕೊಂಡಿದ್ದು, ಆದರೆ ಆ ಜಮೀನಿನಲ್ಲಿ ಯಾವುದೇ ಉತ್ಪತ್ತಿ ಆಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆದ್ದರಿಂದ, ಡಿ. ದಿಲೀಪ್ ಇವರಿಗೆ ಜಮೀನು ಇರುತ್ತದೆ ಅಂತಾ ಅಲ್ಲಗಳೆಯುವಂತಿರುವುದಿಲ್ಲ. ಈ ಬಗ್ಗೆ ಆ.ಸ.ನೌ ರವರು ತಮ್ಮ ಆಕ್ಷೇಪಣೆಯಲ್ಲಿ ಏನು ಹೇಳಿರುವುದಿಲ್ಲ. ಅಲ್ಲದೇ, ಡಿ. ದಿಲೀಪ್ ಇವರು ತಮ್ಮ ಆಕ್ಷೇಪಣೆಯಲ್ಲಿ ತಾನು 3ನೇ ದರ್ಜೆಯ ಗುತ್ತಿಗೆದಾರನಾಗಿರುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲಾತಿಯನ್ನು ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ. ಇದಲ್ಲದೇ, ದೂರುದಾರರು ತಮ್ಮ ದೂರಿನಲ್ಲಿ ಡಿ. ದಿಲೀಪ್ ಇವರು 2015ರಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿದ್ದು ಇರುತ್ತದೆ ಅಂತಾ ಹೇಳಿದ್ದು, ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಡಿ. ದಿಲೀಪ್ ಇವರು ಚುನಾವಣೆಯಲ್ಲಿ ಸ್ಪರ್ಧಿಸಿದ ಬಗ್ಗೆ ಕರಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.8 ಎಂದು ಗುರುತಿಲಾಗಿರುತ್ತದೆ.

ಇದರಿಂದ ಕಂಡುಬರುವುದೇನೆಂದರೆ, ಇವರು 2015ರಲ್ಲಿ ಭುದಗಾವಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಕಂಡುಬರುತ್ತದೆ.

16. ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಸದರಿ ಡಿ. ದಿಲೀಪ್ ಇವರು ತಮ್ಮ ಆಕ್ಷೇಪಣೆಯಲ್ಲಿ ತಾನು ತುಂಬಾ ಬಡತನದ ಸ್ಥಿತಿಯಲ್ಲಿರುತ್ತೇನೆ ಅಂತಾ ಹೇಳಿದ್ದು, ಒಂದು ವೇಳೆ ಆತನು ಆರ್ಥಿಕವಾಗಿ ದುರ್ಬಲನಾಗಿದ್ದರೆ, ಈ ರೀತಿ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ ಅಂತಾ ನುಡಿದಿರುತ್ತಾರೆ. ಡಿ. ದಿಲೀಪ್ ಇವರು ತಮ್ಮ ಆಕ್ಷೇಪಣೆಯಲ್ಲಿ ತಾನು ಚುನಾವಣೆಗೆ ಸ್ಪರ್ಧಿಸಿರುತ್ತೇನೆ ಅಥವಾ ಇಲ್ಲವೋ ಅಂತಾ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಇದು ಏನೇ ಇದ್ದರೂ ಡಿ. ದಿಲೀಪ್ ರವರು ತಾವು ಬಿ.ಪಿ.ಎಲ್ ಕಾರ್ಡ್ ಅನ್ನು ಹೊಂದಿರುತ್ತಾರೆ ಅಂತಾ ಒಪ್ಪಿಕೊಂಡಿರುತ್ತಾರೆ. ಇವರ ಪ್ರಕಾರ ಇವರು ಬಡತನ ಸ್ಥಿತಿಯಲ್ಲಿರುತ್ತಾರೆ ಅಂತಾ ಹೇಳಿದ್ದು, ಆದರೆ ಇವರ ಆದಾಯ ವರ್ಷಕ್ಕೆ ಎಷ್ಟು ಇರುತ್ತದೆ ಅಂತಾ ಹೇಳಿರುವುದಿಲ್ಲ. ಆ.ಸ.ನೌ ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ಬಿ.ಪಿ.ಎಲ್ ಕಾರ್ಡ್ ನೀಡಿರುವುದಿಲ್ಲ ಅಂತಾ ಹೇಳಿದ್ದರು, ಯಾವ ಅವಧಿಯಿಂದ ಯಾವ ಅವಧಿಯವರೆಗೆ ಕೊರಟಗೆರೆಯಲ್ಲಿ ಆಹಾರ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಈ ವಿಚಾರಣೆಯಲ್ಲಿ ಆ.ಸ.ನೌ ರವರು ಹಾಜರಾಗಿದ್ದು, ತಮ್ಮ ರಕ್ಷಣಾ ಹೇಳಿಕೆಯನ್ನು ನೀಡಿರುವುದಿಲ್ಲ ಮತ್ತು ಪಿ.ಡಬ್ಲ್ಯೂ.1 ಇವರನ್ನು ಪಾಟಿಸವಾಲು ಮಾಡಿರುವುದಿಲ್ಲ. ಆದ್ದರಿಂದ, ಆ.ಸ.ನೌ ರವರು ಪಡಿತರ ಚೀಟಿಯನ್ನು ನೀಡಿರುವುದನ್ನು ಅಲ್ಲಗಳೆಯುವಂತಿಲ್ಲ. ಅಲ್ಲದೇ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಡಿ. ದಿಲೀಪ್ ಇವರಿಗೆ ನೀಡಿದ ಪಡಿತರ ಚೀಟಿಯ ಆನ್‌ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.7 ಅಂತಾ ಗುರುತಿಸಲಾಗಿರುತ್ತದೆ. ಇದನ್ನು ಪರಿಶೀಲಿಸಿದಾಗ, ಇವರಿಗೆ ಪಡಿತರ ಚೀಟಿ ನೀಡಿದ್ದು ಕಂಡುಬರುತ್ತದೆ.

17. ಎಂತಹ ವ್ಯಕ್ತಿಗಳು ಬಿ.ಪಿ.ಎಲ್ ಕಾರ್ಡ್‌ಗೆ ಅರ್ಹರಾಗಿರುತ್ತಾರೆ ಎನ್ನುವ ಬಗ್ಗೆ ಸರ್ಕಾರದ ನಿಯಮಗಳು ಇರುತ್ತವೆ. Income limit for BPL card:- BPL card or Below Poverty Line card is a type of a ration card which is allocated to people whose overall income falls under below poverty line category, as per the Indian Government Regulations. This card is a very popular one, so to speak were there are large number of people who apply for the same. The subsidies for this particular group is fixed by the State Government, which is generally much lower than the normal market rate. The main criteria for availing a BPL card is, if the person earns less than Rs.6,400/- in rural areas and less than Rs.11,850/- in urban areas per month. Anything exceeding this income limit and then that person is not eligible to own a BPL card.

18. ಡಿ. ದಿಲೀಪ್ ಇವರು ಕೊರಟಗೆರೆ ತಾಲ್ಲೂಕಿನ ದೊಗ್ಗೇನಹಳ್ಳಿಯ ವಾಸಿಯಾಗಿದ್ದು, ಅದು ಗ್ರಾಮೀಣ ಭಾಗವಾಗಿರುತ್ತದೆ. ಆ.ಸ.ನೌ ರವರು ಡಿ. ದಿಲೀಪ್ ಇವರಿಗೆ ಪ್ರತಿ ತಿಂಗಳಿಗೆ ರೂ.6,400/–ಕ್ಕಿಂತ ಕಡಿಮೆ ಆದಾಯ ಇತ್ತು ಎನ್ನುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಇದಲ್ಲದೇ, ಪಿ.ಡಬ್ಲ್ಯೂ.1 ಇವರನ್ನು ಪಾಟಿಸವಾಲು ಸಹ ಮಾಡಿರುವುದಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಶಿಸ್ತು ಪ್ರಾಧಿಕಾರವು ಆ.ಸ.ನೌ ರವರು ಅನರ್ಹ ವ್ಯಕ್ತಿಗೆ ಬಿ.ಪಿ.ಎಲ್ ಕಾರ್ಡ್ ಅನ್ನು ನೀಡಿ ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ರುಜುವಾತುಪಡಿಸಿರುತ್ತಾರೆ.

19. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

&

20.ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

## ನಿರ್ಣಯ

ಆ.ಸ.ನೌಕರ **ಶ್ರೀ. ಉದಯ್ ಕುಮಾರ್,** ಆಹಾರ ನಿರೀಕ್ಷಕರು, ಕೊರಟಗೆರೆ ತಾಲ್ಲೂಕು, ಕೊರಟಗೆರೆ, ತುಮಕೂರು ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 30/04/2018 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Baradeshi 19/3

(**ಸುದೇಶ್ ರಾಜಾರಾಮ್ ಪರದೇಶಿ**)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Mallikarjuna Kamatagi S/o Eshwarappa, Tumkur. |
| 2 | **Documents marked on behalf of the Disciplinary Authority Ex.P-1 to Ex.P-8** | |
| | **Ex.P.1** | Complaint given to this institution dtd: 28/10/2014. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | BPL card. |
| | **Ex.P.5** | Grade-III Contract License. |
| | **Ex.P.6** | Bank pass book. |
| | **Ex.P.7** | Online copy of Ration Card. |
| | **Ex.P.8** | A pamphlet copy of the Dilip contesting the Gram Panchayat election. |

Dated this the 19th March, 2022

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.